



# ಮಳೆ ಬರುವ ಕಾಲಕ್ಕೆ..!

■ ಚಿತ್ರ– ಬರಹ: **ಅಶೋಕ ಉಚ್ಚಂಗಿ**

ಮಳೆ ಎಂದರೆ ಯಾರಿಗೆ ತಾನೆ ಇಷ್ಟವಿಲ್ಲ? ಮಳೆ ಬಂದೊಡನೆ ಹೊರಬಂದು ಮಳೆಲೀಲೆಯಲ್ಲಿ ತಾನೂ ಒಂದಾಗಿ ಬಿಡುವ ಧಾವಂತ ಅನೇಕರಿಗೆ. ಮನೆಯೊಳಗೇ ಕುಳಿತು ಮಳೆಯ ಹಾಡನ್ನು ಕೇಳುತ್ತಾ ಮಳೆಯ ಸೊಗಸನ್ನು ಅನುಭವಿಸುವ ಆಸೆ ಮತ್ತೆ ಕೆಲವರಿಗೆ.

ಮಳೆಯ ಸೊಬಗು ಎಲ್ಲರ ಮನಸೆಳೆಯುತ್ತದೆ. ಮಳೆಯ ಮೋಹಕತೆಯನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯಬೇಕೆನ್ನುವ ಆಸೆ. ಆದರೆ ಬೆಲೆಬಾಳುವ ಕ್ಯಾಮೆರಾ ಹಾಳಾದೀತೆಂಬ ಭಯ. ಇಂತಹ ಸಂದಿಗ್ಧದಲ್ಲಿ ಮನೆಯ ಒಳಗಿನಿಂದಲೇ ಮಳೆಯ ಸೊಗಡನ್ನು, ಸಿರಿವಂತಿಕೆಯನ್ನು ಕಲಾತ್ಮಕವಾಗಿ ಚಿತ್ರಿಸುವ ಉಪಾಯ ಇಲ್ಲಿದೆ.

ಮಳೆ ಇಳೆಗೆ ಇಳಿವ ವೇಳೆಯಲ್ಲಿ ನಮ್ಮನ್ನೂ ಹಾಗೂ ಮಳೆಯನ್ನು ಬೇರ್ಪಡಿಸಿರುವ ಕಿಟಕಿಯ ಗಾಜುಗಳತ್ತ ಒಮ್ಮೆ ನೋಡಿ. ಮುತ್ತಿನ ಮಣಿಗಳ ಹಾಗೆ ಎರಚಲು ಗಾಜಿನ ಮೇಲೆ ನಿಂತಿರುತ್ತವೆ, ಮೆಲ್ಲನೆ ಜಾರುತ್ತಿರುತ್ತವೆ. ಈ ಗಾಜಿನ ಮೇಲಿನ ಮಣಿಗಳ ಮೂಲಕ ಹೊರ ಜಗತ್ತನ್ನು ಒಮ್ಮೆ ನೋಡಿ. ಮಳೆಯ ವಿದ್ಯಮಾನಗಳಿಗೆ ವಿಭಿನ್ನ ಹಾಗೂ ವಿಶಿಷ್ಟ ರೂಪ ನೀಡಬಹುದು.

ಆಹಾ ! ಈ ಮಳೆಬಿಂದುಗಳು ಅದೆಷ್ಟು ಕಲಾತ್ಮಕ! ಮಳೆಹನಿಗಳನ್ನು ಮುನ್ನೆಲೆಯಾಗಿಯೋ, ಚೌಕಟ್ಟಾಗಿಯೋ ಬಳಸಿ ಮಳೆ ಸುರಿವ ಅನುಭವವನ್ನು ಪರಿಣಾಮಕಾರಿಯಾಗಿ ಚಿತ್ರಿಸಬಹುದು. ಈ ಕಿಟಕಿ ಗಾಜುಗಳು ಹೊರಗಿನ ಮಳೆಯನ್ನೂ, ತೋಯದೇ ನಿಂತ ನಮ್ಮನ್ನೂ ಬೇರ್ಪಡಿಸಿದ ಅನುಭವವನ್ನು ನೋಡುಗನಿಗೆ ಚಿತ್ರಗಳಲ್ಲಿ ಪ್ರತಿಬಿಂಬಿಸಬಹುದು.

ಮಳೆಚಿತ್ರಗಳಿಗೆ ಮನೆಯೊಳಗಷ್ಟೇ ಅಲ್ಲ ಕಾರು, ಬಸ್ಸುಗಳ ಒಳಗಿನಿಂದಲೂ ಕಲಾತ್ಮಕ ಕಣ್ಣಾಗಬಹುದು. ಮಳೆ ಸುರಿವ ವೇಳೆಯಲ್ಲಿ ರಸ್ತೆಯಲ್ಲಿ ಸಾಗುವ ವಾಹನಗಳ ಬೆಳಕು, ಕೊಡೆ ಹಿಡಿದು ನಡೆವ ಮಂದಿ, ಮನೆಯ ಅಂಗಳದಲ್ಲಿ ಅಂಟಿಸಿದ ಟೈಲ್ಸ್‌ಗಳು, ಎಲ್ಲಿಂದಲೋ ಹಾರಿಬಂದು ಕಿಟಕಿಯ ಗಾಜಿಗೆ ಅಂಟಿದ ಎಲೆ– ಹೀಗೆ ಹತ್ತು ಹಲವು ಸಂಗತಿಗಳು ರೋಚಕ ರೂಪ ತಳೆಯುತ್ತವೆ.

